ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 48/2018

(ಫ್ರಾಸಾ-3 ಚಾಸಾ-3)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 21.04.2025

| | | |
|---|---|---|
| ಸಾಕ್ಷಿದಾರರ ಹೆಸರು | - | ವೆಂಕಟೇಶಪ್ಪ |
| ತಂದೆಯ ಹೆಸರು | - | ದೊಡ್ಡಬ್ಬಯ್ಯ |
| ವಯಸ್ಸು | - | 54 ವರ್ಷ, |
| ಉದ್ಯೋಗ | - | ಕೂಲಿ ಕೆಲಸ |
| ವಾಸ | - | ಆನೇಕಲ್ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಮೃತ ಮಂಜುನಾಥ ನನ್ನ ಮಗ. ಚಾಸಾ-2 ನನ್ನ ಮಗಳು. ಚಾಸಾ-4 ನನ್ನ ಹೆಂಡತಿ. ಚಾಸಾ-5 ಮೃತನ ಹೆಂಡತಿ. ನಾವು ಬೋವಿ ಜಾತಿಗೆ ಸೇರಿದವರು. ಮೃತನು ತನ್ನ ಹೆಂಡತಿ ಜೊತೆ ಮದುವೆಯಾದ ನಂತರ ಚಾಲಕ ವೃತ್ತಿ ಮಾಡಿಕೊಂಡುನಮ್ಮ ಮನೆಯಲ್ಲಿಯೇ ವಾಸ ಮಾಡುತ್ತಿದ್ದ. ಆತ ಚಾಲಕನಾಗಿ ಕೆಲಸಕ್ಕೆ ಹೋದರೆ 10-15 ದಿನಗಳಿಗೊಮ್ಮೆ ವಾಪಸ್ಸು ಮನೆಗೆ ಬರುತ್ತಿದ್ದ. ಈಗ ಸುಮಾರು 8 ವರ್ಷಗಳ ಹಿಂದೆ ಒಮ್ಮೆ ಮಂಜುನಾಥ ಡ್ರೈವರ್ ಕೆಲಸಕ್ಕೆ ಹೋಗಿ ವಾಪಸ್ಸು ಬಂದಿರುವುದಿಲ್ಲ. ಪೋಲಿಸರು ತಿಳಿಸಿದ ಮೇರೆಗೆ ನಾನು ಠಾಣೆಗೆ ಹೋಗಿದ್ದು ಆನೇಕಲ್ ಪೋಲಿಸರು ನನ್ನ ಮಗ ಮೃತಪಟ್ಟಿದ್ದಾನೆ ಎಂದು ನಮಗೆ ಫೋಟೋ ತೋರಿಸಿದ್ದರು. ಯಾವುದೋ ಗಲಾಟೆಯಲ್ಲಿ ನನ್ನ ಮಗ ಮೃತಪಟ್ಟಿರುತ್ತಾನೆ ಎಂದು ನನಗೆ ತಿಳಿಯಿತು. ಯಾರು ಗಲಾಟೆ ಮಾಡಿದ್ದರು ನನಗೆ ಗೊತ್ತಿಲ್ಲ. ನಂತರ ಪೋಲಿಸರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನನ್ನ ಮಗನ ಮೃತದೇಹ ನೀಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್ ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2. ನಾನು ಠಾಣೆಗೆ ಹೋಗಿದ್ದಾಗ ಪೋಲಿಸರು ಆರೋಪಿತರು ಮೃತನಿಗೆ ಮಧ್ಯಪಾನ ಮಾಡಿಸಿ ಯಾವುದೋ ದ್ವೇಷದಿಂದ ದೊಣ್ಣೆ ಮತ್ತು ಮಚ್ಚುಗಳಿಂದ ಹೊಡೆದು ಸಾಯಿಸಿರುವುದಾಗಿ ಪೋಲಿಸರು ನನಗೆ ತಿಳಿಸಿರುತ್ತಾರೆ ಮತ್ತು ಆರೋಪಿತರನ್ನು ನಾನು ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ "ನನ್ನ ಮಗ ಮಂಜುನಾಥನ ಸಾವಿನ ಬಗ್ಗೆ ------------------- ಮತ್ತೆ ನೋಡಿದರೆ ಗುರುತಿಸುತ್ತೇನೆ" ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರ್ತಿಸಲಾಯಿತು. ನನ್ನ ಮಗನ ಸಾವಿಗೆ ಕಾರಣ ಗೊತ್ತಿದ್ದರೂ ಹಾಗೂ ನಾನು ನಿಪಿ-4 ರಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ ಆರ್ ಎಂ ವಕೀಲರಿಂದಃ</u>**

3. ಮಂಜುನಾಥ ಮೃತನಾಗುವುದಕ್ಕಿಂತ ಮೂರು ವರ್ಷದ ಮೊದಲು ಆತನಿಗೆ ಮದುವೆಯಾಗಿತ್ತು. ಮಂಜುನಾಥನಿಗೆ ಮದುವೆ ಆದ ನಂತರ ಮಧ್ಯಪಾನ ಮಾಡುವ ಅಭ್ಯಾಸ ಆಗಿತ್ತು ಎಂದರೆ ಸರಿ ಆದರೆ ಯಾವಾಗಲಾದರೊಮ್ಮೆ ಕುಡಿಯುತ್ತಿದ್ದ ಎಂದು ಹೇಳುತ್ತಾರೆ. ಮದುವೆ ಆದ ನಂತರ ಮಂಜುನಾಥ ಮಧ್ಯಪಾನ ಮಾಡಿ ಬಂದು ಹೆಂಡತಿಯೊಂದಿಗೆ ಗಲಾಟೆ ಮಾಡುತ್ತಿದ್ದರಿಂದ ನನ್ನ ಸೊಸೆ ಮನೆ ಬಿಟ್ಟು ತವರು ಮನೆಗೆ ಹೋಗಿದ್ದಳು ಎಂದರೆ ಸರಿಯಲ್ಲ. ಮೃತನು ಕುಡಿಯುತ್ತಿದ್ದು ಯಾವಾಗಲಾದರೊಮ್ಮೆ ಮನೆಗೆ ಬರುತ್ತಿದ್ದುದ್ದರಿಂದ ಸೊಸೆ ತವರು ಮನೆಗೆ ಹೋಗಿದ್ದಳು.

**<u>ಪಾಟೀ ಸವಾಲುಃ</u>** 2 ಮತ್ತು 3 ನೇ ಆರೋಪಿತರ ಪರ ಶ್ರೀ ಹೆಚ್ ಜಿ ಕೆ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

**<u>ಮರುವಿಚಾರಣೆ: ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು